# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 317 |
| ಸದಸ್ಯರ ಹೆಸರು | : | ಡಾ: ಡಿ.ತಿಮ್ಮಯ್ಯ |
| ಉತ್ತರಿಸುವ ದಿನಾಂಕ | : | 07-07-2023 |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಇಲಾಖೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಮೈಸೂರು ನಗರದಲ್ಲಿ ಡಾ: ಬಾಬು ಜಗಜೀವನ್ ರಾಮ್ ಭವನವನ್ನು ನಿರ್ಮಿಸಲಾಗಿದೆಯೇ; ಹಾಗಿದ್ದಲ್ಲಿ, ಯಾವಾಗ ನಿರ್ಮಿಸಲಾಗಿದೆ; (ಸಂಪೂರ್ಣ ವಿವರ ನೀಡುವುದು) | ಹೌದು.<br>ಮೈಸೂರು ನಗರದಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ರೂ.50.00 ಲಕ್ಷಗಳ ಮತ್ತು ಸ್ಥಳೀಯ ಮೂಲಗಳಿಂದ ರೂ.400.00 ಲಕ್ಷಗಳು ಒಟ್ಟು ರೂ.450.00 ಲಕ್ಷಗಳ ವೆಚ್ಚದಲ್ಲಿ ಡಾ\|\| ಬಾಬು ಜಗಜೀವನರಾಮ್ ಭವನ ನಿರ್ಮಾಣ ಮಾಡಲು ಸರ್ಕಾರದ ದಿನಾಂಕ:19-01-2010 ರಲ್ಲಿ ಮಂಜೂರಾತಿ ನೀಡಿ, 2016ನೇ ಸಾಲಿನಲ್ಲಿ ಕಟ್ಟಡವು ಪೂರ್ಣಗೊಳಿಸಿ, ಉಧ್ಘಾಟಿಸಲಾಗಿರುತ್ತದೆ. |
| ಆ) | ಈ ಭವನವನ್ನು ಉದ್ದೇಶಿತ ಉದೇಶಕ್ಕೆ ಬಳಸದೆ ಸರ್ಕಾರಿ ಕಚೇರಿಗೆ ಬಳಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ.<br>ಸಮಾಜ ಕಲ್ಯಾಣ ಸಚಿವರು 2017 ರಲ್ಲಿ ಮೈಸೂರು ನಗರದಲ್ಲಿ ನಿರ್ಮಾಣಗೊಂಡಿರುವ ಡಾ\|\| ಬಾಬು ಜಗಜೀವನರಾಂ ಭವನದ ಕಟ್ಟಡಕ್ಕೆ ಭೇಟಿ ನೀಡಿ ಸ್ಥಳ ಪರಿಶೀಲನೆ ಮಾಡಿದ ಸಂದರ್ಭದಲ್ಲಿ ಜನಾಂಗದ ಹಲವಾರು ಮುಖಂಡರುಗಳು ಸಂಪರ್ಕಿಸಿ, ಈ ಭವನ ಕಟ್ಟಡದಲ್ಲಿ ಕಾರ್ಯಕ್ರಮಗಳನ್ನು ಆಯೋಜಿಸಲು ಸೂಕ್ತವಲ್ಲವೆಂದು ಬೇರೊಂದು ಬೃಹತ್ ಕಟ್ಟಡವನ್ನು ನಿರ್ಮಾಣ ಮಾಡಿಕೊಡುವಂತೆ ಮನವಿ ಸಲ್ಲಿಸಿರುತ್ತಾರೆ. |

---2

| | | |
|---|---|---|
| | | ಆದ್ದರಿಂದ, ಪ್ರಸ್ತುತ ನಿರ್ಮಾಣವಾಗಿರುವ ಭವನದ ಕಟ್ಟಡವನ್ನು ಇಲಾಖಾ ವ್ಯಾಪ್ತಿಗೆ ಬರುವ ಈ ಕೆಳಕಂಡ ಜಿಲ್ಲಾ ಮಟ್ಟದ ಕಛೇರಿಗಳಿಗೆ ಉಪಯೋಗಿಸಿಕೊಳ್ಳಲು ಮೈಸೂರು ಜಿಲ್ಲಾಧಿಕಾರಿಗಳು ನೀಡಿರುವ ಆದೇಶದ ಮೇರೆಗೆ ಕಾರ್ಯ ನಿರ್ವಹಿಸುತ್ತಿದೆ.<br>1. ಜಂಟಿ ನಿರ್ದೇಶಕರು, ಸಮಾಜ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ.<br>2. ಜಿಲ್ಲಾ ಅಧಿಕಾರಿ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ, ಮೈಸೂರು ಜಿಲ್ಲೆ.<br>3. ಯೋಜನಾ ಸಮನ್ವಯಾಧಿಕಾರಿಗಳು, ಸಮಗ್ರ ಗಿರಿಜನ ಅಭಿವೃಧ್ಧಿ ಇಲಾಖೆ, ಮೈಸೂರು ಜಿಲ್ಲೆ. |
| ಇ) | ಹಾಗಿದ್ದಲ್ಲಿ, ಈ ಭವನವನ್ನು ಉದ್ದೇಶಿತ ಸಮುದಾಯದ ಕಾರ್ಯಗಳಿಗೆ ಬಳಸಲು ಅನುಕೂಲ ಆಗುವಂತೆ ಸರ್ಕಾರ ಕೈಗೊಳ್ಳುವ ಕ್ರಮಗಳೇನು? (ವಿವರ ನೀಡುವುದು) | ಮಾನ್ಯ ವಿಧಾನಪರಿಷತ್ತಿನ ಸದಸ್ಯರು ಜಿಲ್ಲಾಧಿಕಾರಿಗಳಿಗೆ ಪತ್ರ ಸಲ್ಲಿಸಿ, ಡಾ\|\| ಬಾಬು ಜಗಜೀವನ ರಾಂ ಕಟ್ಟಡದಲ್ಲಿ ನಡೆಯುತ್ತಿರುವ ಕಛೇರಿಯನ್ನು ತೆರವುಗೊಳಿಸುವಂತೆ ಕೋರಿರುತ್ತಾರೆ. ಅದರಂತೆ ಆಯುಕ್ತರಿಗೆ ಪ್ರಸ್ತಾವನೆ ಸಲ್ಲಿಕೆಯಾಗಿರುತ್ತದೆ., ಸದರಿ ಭವನದಲ್ಲಿ ಕಾರ್ಯನಿರ್ವಹಿಸುತ್ತಿರುವ ಕಛೇರಿಗಳನ್ನು ತೆರವುಗೊಳಿಸಿ, ಸಮುದಾಯದ ಉಪಯೋಗಕ್ಕೆ ಬಳಕೆಮಾಡಲು ನಿಯಮಾನುಸಾರ ಅಗತ್ಯ ಕ್ರಮಕೈಗೊಳ್ಳಲಾಗುವುದು. |

**ಸಕಇ 207 ಎಸ್ ಎಲ್‌ಪಿ 2023**

**(ಡಾ|| ಹೆಚ್.ಸಿ.ಮಹದೇವಪ್ಪ)**
**ಸಮಾಜ ಕಲ್ಯಾಣ ಇಲಾಖೆ ಸಚಿವರು**